# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. 21/2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮೊನಿಕಾ | ಪ್ರಮಾಣ ಮಾಡಿದ ದಿನಾಂಕಃ |
| ತಂದೆ ಹೆಸರು | ಃ ಚಂದ್ರಮೋಹನ | 16.08.2022 |
| ವಯಸ್ಸು | ಃ 30 ವರ್ಷ | |
| ವೃತ್ತಿ | ಃ ಖಾಸಗಿ ಕೆಲಸ | ಪಿಡಬ್ಲ್ಯೂ ಃ 04 |
| ವಾಸ ಸ್ಥಳ | ಃ ಮೈಸೂರು | ಸಿಡಬ್ಲ್ಯೂ ಃ 06 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

ನ್ಯಾಯಾಲಯದೆದುರು ಹಾಜರಿರುವ ಆರೋಪಿ ಪರಿಚಯ ಇದೆ. ಅವರು ನಮ್ಮ ಮನೆಯ ಪಕ್ಕದಲ್ಲಿ ವಾಸ ಇರುತ್ತಾರೆ. ಮೃತ ಪವಿತ್ರಾಕುಮಾರಿ ನನ್ನ ತಾಯಿ. 2015ರಲ್ಲಿ ನಾನು ಎಂ.ಟೆಕ್ ವಿದ್ಯಾಭ್ಯಾಸ ಮಾಡುತ್ತಿದ್ದೆ, ನನ್ನ ತಾಯಿ ಆರೋಪಿ ಕಡೆಯಿಂದ ಬಡ್ಡಿಗೆ ಹಣ ಪಡೆ ಯುತ್ತಿದ್ದಳು. ಆಗಾಗ್ಗೆ ಸಾಲ ಪಡೆದು ವಾಪಸ್ ಮಾಡುತ್ತಿದ್ದಳು. ಕೊನೆಯ ಬಾರಿ ನಾನು ನನ್ನ ಕಾಲೇಜ್‌ನ ಖರ್ಚಿಗಾಗಿ ರೂ.40,000/-ಗಳ ಸಾಲ ಮಾಡಿದ್ದಳು. ವಾರಕ್ಕೆ ರೂ.4,000/- ಬಡ್ಡಿ ಕೊಡಲು ಆರೋಪಿ ಕೇಳಿದ್ದಳು. ನಾವು ಬಡ್ಡಿಯನ್ನು ಕ್ರಮವಾಗಿ ಕಟ್ಟುತ್ತಿದ್ದು ಕೊನೆಯ ಎರಡು ವಾರದ ಬಡ್ಡಿಯನ್ನು ಆರೋಪಿಗೆ ಕೊಟ್ಟಿರಲಿಲ್ಲ. ಅದರಿಂದ ನನ್ನ ತಾಯಿ ಸಾಯುವ 5 ದಿನಗಳ ಹಿಂದೆ ಆರೋಪಿ ಮನೆಯ ಬಳಿ ಬಂದು ಹಣ ಮತ್ತು ಬಡ್ಡಿಯನ್ನು ಕೊಡುವಂತೆ ನನ್ನ ತಾಯಿಗೆ ಬೈದು ಗಲಾಟೆ ಮಾಡಿದ್ದಳು.

2. ದಿನಾಂಕ 11.06.2015ರಂದು ನಾನು ಮತ್ತು ನನ್ನ ತಂದೆ ಜೊತೆ ಬೆಳಿಗ್ಗೆ ಕಾಲೇಜ್‌ಗೆ ಹೋಗಿದ್ದೆ, ಅದೇ ದಿನ 12ಃ30ರ ವೇಳೆಗೆ ಇಬ್ಬರು ಮನೆಗೆ ವಾಪಸ್ ಬಂದೆವು. ಆಗ ನನ್ನ ತಾಯಿ ಮನೆಯಲ್ಲಿ ಒಬ್ಬಳೆ ಇದ್ದಳು. ನಾವು ಬಂದಾಗ ಬಾತ್‌ರೂಂ ಬಳಿ ಪ್ಯಾಸೇಜ್‌ನಲ್ಲಿ ನನ್ನ ತಾಯಿ ಬಿದ್ದಿದ್ದಳು. ಅವಳ ಬಳಿ ಕೆಟ್ಟ ವಾಸನೆ ಬರುತ್ತಿದ್ದು, ಪಕ್ಕದಲ್ಲಿ ವಿಷದ ಪ್ಯಾಕೆಟ್ ಬಿದ್ದಿತ್ತು. ಅದರಿಂದ ಅವಳು ವಿಷ ಕುಡಿದಿದ್ದಾಳೆ ಎಂದು ತಿಳಿದು ಮಿಷನ್ ಆಸ್ಪತ್ರೆಗೆ ಕರೆದುಕೊಂಡು

ಹೋದೆವು. ನಾವು ಆಸ್ಪತ್ರೆಗೆ ಹೋಗಲು ಆಟೋದಲ್ಲಿ ಕುಳಿತಿದ್ದಾಗ ಆರೋಪಿ ನಮ್ಮ ಬಳಿ ಬಂದು ತನಗೆ ಹಣ ಕೊಡಬೇಕಾಗುತ್ತದೆ ಎಂದು ಹೇಳಿ ನಿಮ್ಮ ತಾಯಿ ನಾಟಕ ಮಾಡುತ್ತಿದ್ದಾಳೆ ಎಂದು ಹೇಳಿದ್ದಳು. ಆಸ್ಪತ್ರೆಯಲ್ಲಿ ಅದೇ ದಿನ ಚಿಕಿತ್ಸೆ ಫಲಕಾರಿಯಾಗದೇ ಸಂಜೆ 5:30ರ ವೇಳೆಗೆ ನನ್ನ ತಾಯಿ ಮೃತಪಟ್ಟಿರುತ್ತಾಳೆ. ನನ್ನ ತಾಯಿಯ ಸಾವಿಗೆ ಆರೋಪಿಯೇ ಕಾರಣ ಆಗಿದ್ದಾಳೆ. ಮರುದಿನ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದ:-

3. ಯಾವ ದಿನಾಂಕದಂದು ನನ್ನ ತಾಯಿ ಸಾಲ ಪಡೆದಿದ್ದಳು ಎನ್ನುವುದನ್ನು ಹೇಳಲು ಆಗುವುದಿಲ್ಲ. ನನ್ನ ತಾಯಿ ಮತ್ತು ಆರೋಪಿ ನಡುವಿನ ಹಣಕಾಸಿನ ವ್ಯವಹಾರವನ್ನು ನಾನು ಖುದ್ದಾಗಿ ನೋಡಿಲ್ಲ. ಈ ವಿಚಾರವನ್ನು ತಾಯಿ ಕಡೆಯಿಂದ ಕೇಳಿದ್ದೆ. ನನ್ನ ತಾಯಿ ಆರೋಪಿ ಕಡೆಯಿಂದ ಸಾಲ ಪಡೆದಿದ್ದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ನಾನು 10ನೇ ತರಗತಿ ಇರುವಾಗಿನಿಂದಲೂ ಆರೋಪಿ ಕಡೆಯಿಂದ ಆಗಾಗ್ಗೆ ಹಣ ಪಡೆಯುವುದು ವಾಪಸ್ ಕೊಡು ವುದು ಮಾಡುತ್ತಿದ್ದಳು. ಆರೋಪಿ 5 ದಿನಗಳ ಹಿಂದೆ ಬಂದು ಗಲಾಟೆ ಮಾಡಿದ್ದಳು. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಇತರೆ ವಾಸದ ಮನೆಗಳು ಇವೆ. ಆರೋಪಿ ಗಲಾಟೆ ಮಾಡಿದ್ದ ಬಗ್ಗೆ ನಾವು ದೂರು ಕೊಟ್ಟಿರಲಿಲ್ಲ.

4. ನನ್ನ ತಾಯಿ ನನ್ನ ವಿದ್ಯಾಭ್ಯಾಸದ ಸಲುವಾಗಿ ಸಾಲ ಮಾಡಿದ್ದಳು. ನನ್ನ ತಾಯಿ ಬೇರೆ ಯಾರ ಕಡೆಯಾದರೂ ಸಾಲ ಪಡೆಯುತ್ತಿದ್ದಳೇ ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿ ಎಲ್ಲಾ ಸೇರಿ ರೂ.3,00,000/- ಆಗಿದೆ ಎಂದು, ಅದನ್ನು ವಾಪಸ್ ಕೊಡುವಂತೆ ಗಲಾಟೆ ಮಾಡಿದ್ದಳು. ನನ್ನ ತಾಯಿ ಬೇರೆಯವರ ಕಡೆ ರೂ.2, 3, 5 ಲಕ್ಷಗಳಂತೆ ಸಾಲ ಮಾಡಿದ್ದಳು ಎಂದರೆ ಸರಿ ಯಲ್ಲ. ನನ್ನ ತಾಯಿ ಸಾವಿಗೂ, ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಪೊಲೀಸರಿಗೆ ದೂರು ಕೊಟ್ಟಿದ್ದ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ಅದರಲ್ಲಿ ಮೊದಲು ಯಾರ ಮೇಲೆ ಅನುಮಾನ ಇಲ್ಲ ಎನ್ನುವುದಾಗಿ ತಿಳಿಸಿದ್ದರು ಎಂದರೆ ಸರಿ. ಬೇರೆಬೇರೆ ವ್ಯಕ್ತಿಗಳು ಮನೆಯ ಬಳಿ ಬಂದು ನನ್ನ ತಾಯಿ ಪಡೆದಿದ್ದ ಸಾಲದ ಹಣ ಹಿಂತಿರುಗಿಸುವಂತೆ ಗಲಾಟೆ

**ಮಾಡಿದ್ದರಿಂದ ಅವರಿಂದ ತಪ್ಪಿಸಿಕೊಳ್ಳಲು ಆರೋಪಿ ವಿರುದ್ದ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ನೇರವಾಗಿ ದೂರು ಕೊಡಲು ಭಯ ಇತ್ತು. ಅದ ರಿಂದ ಆ ರೀತಿ ದೂರು ಕೊಟ್ಟಿರಲಿಲ್ಲ. ನಾನು, ನನ್ನ ತಂದೆ ಎಲ್ಲರೂ ಸೇರಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಮರು ವಿಚಾರಣೆಃ- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**16.08.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.